ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 07 (57)

ಅಧ್ಯಕ್ಷರು : ಸಮಯ ಕೇಳಿದ್ದಾರೆ.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ಇದು ಹೋದ ಅಧಿವೇಶನದಲ್ಲಿ ಪ್ರಶ್ನೆ ಕೇಳಿದಂತಹದ್ದು.

ಅಧ್ಯಕ್ಷರು : ಈ ಅವಧಿಯಲ್ಲಿಯೇ ಉತ್ತರ ಕೊಡಿಸುತ್ತೇನೆ.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ : ನನಗೆ ನಿನ್ನೆ ಬಂದಿದೆ. ಹೋದ ಸಲದ ಅಸೆಂಬ್ಲಿಯದು ಉತ್ತರ ನಿನ್ನೆ ಬಂದಿದೆ.

ಅಧ್ಯಕ್ಷರು : ಈ ಸಲವೇ ಉತ್ತರ ಕೊಡಿಸಿಬಿಡುತ್ತೇನೆ. Time bond ಹಾಕಿಕೊಳ್ಳಿ. 15 ದಿನಗಳ ಕಾಲಾವಕಾಶ ಕೇಳಿದ್ದಾರೆ. ನಿಮಗೆ ಈ ಅವಧಿಯಲ್ಲಿಯೇ ಕೊಡಿಸಿಬಿಡುತ್ತೇನೆ.

ಮಗುವಿಗೊಂದು ಮರ ಶಾಲೆಗೊಂದು ವನ ಯೋಜನೆ ಅನುಷ್ಠಾನ

08(100) ಶ್ರೀ ಸುಧಾಕರ ಲಾಲ್ ಪಿ.ಆರ್. (ಕೊರಟಗೆರೆ):– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ರಾಜ್ಯದಲ್ಲಿ ಮಗುವಿಗೊಂದು ಮರ ಶಾಲೆಗೊಂದು ವನ ಯೋಜನೆಯು ಜಾರಿಯಲ್ಲಿದೆಯೇ ; ಹಾಗಿದ್ದಲ್ಲಿ, ಈ ಯೋಜನೆಯನ್ನು ಯಾವ ವರ್ಷದಿಂದ ಜಾರಿಗೊಳಿಸಲಾಗಿದೆ ;

(ಆ) ಈ ಯೋಜನೆಯು ಜಾರಿಗೊಂಡ ದಿನದಿಂದ ಈ ವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; ಎಷ್ಟು ಸಸಿಗಳನ್ನು ಶಾಲೆಗಳಲ್ಲಿ ನೆಡಲಾಗಿದೆ ; (ವರ್ಷವಾರು ಅನುದಾನ ಮತ್ತು ಸಸಿಗಳ ವಿವರಗಳನ್ನು ನೀಡುವುದು)

(ಇ) ಈ ಯೋಜನೆಯು ಯಶಸ್ವಿ ಯಾಗಿದೆಯೇ ; ಹಾಗಿದ್ದಲ್ಲಿ, ಯಾವ ರೀತಿ ಯಶಸ್ವಿಯಾಗಿದೆ ; (ವಿವರ ನೀಡುವುದು)

(ಈ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು;

(ಉ) ಈ ಯೋಜನೆಯ ರೂಪುರೇಷೆಗಳು ಹಾಗೂ ಉದ್ದೇಶಗಳು ಏನು ; ಈ ಯೋಜನೆಯನ್ವಯ ಶಾಲೆಗೊಂದು ವನ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ. ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):–

(ಅ) ಹೌದು. ----------

ಈ ಯೋಜನೆಯನ್ನು ರಾಜ್ಯದಲ್ಲಿ 2011–12ನೇ ಸಾಲಿನಿಂದ ಜಾರಿಗೊಳಿಸಲಾಗಿದೆ.

(ಆ) ಈ ಯೋಜನೆಯು ಜಾರಿಗೊಂಡ ದಿನದಿಂದ ಈವರೆವಿಗೆ ಬಿಡುಗಡೆಯಾದ ಅನುದಾನ ಹಾಗೂ ಶಾಲೆಗಳಲ್ಲಿ ನೆಟ್ಟ ಸಸಿಗಳ ವರ್ಷವಾರು ವಿವರ ಕೆಳಕಂಡಂತಿರುತ್ತದೆ.

ವರ್ಷ	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)	ಶಾಲೆಗಳಲ್ಲಿ ಬೆಳೆಸಲಾದ/ ನಡೆಸಲಾದ ಸಸಿಗಳು (ಲಕ್ಷಗಳಲ್ಲಿ)
2011–12	100.00	2011–12ನೇ ಸಾಲಿನಲ್ಲಿ ನೀಡಲಾದ ಅನುದಾನದಲ್ಲಿ 5'XB" , 6"X9" ಹಾಗೂ 8"X12" ಗಾತ್ರದ ಪಾಲಿಥಿನ್ ಚೀಲಗಳಲ್ಲಿ 29.82 ಲಕ್ಷ ಸಸಿಗಳನ್ನು ನರ್ಸರಿಗಳಲ್ಲಿ ಬೆಳೆಸಲಾಗಿರುತ್ತದೆ.
2012–13	35.00	2012–13ನೇ ಸಾಲಿನಲ್ಲಿ ನೀಡಲಾದ ಅನುದಾನದಲ್ಲಿ 2011–12ನೇ ಸಾಲಿನಲ್ಲಿ ಬೆಳೆಸಲಾದ 29.82 ಲಕ್ಷ ಸಸಿಗಳನ್ನು ಪೋಷಣೆ ಮಾಡಿ ಈ ಸಸಿಗಳನ್ನು ಶಾಲಾ ಮಕ್ಕಳಿಗೆ ವಿತರಿಸಲಾಗಿರುತ್ತದೆ.
2013–14	50.00	2013–14ನೇ ಸಾಲಿನಲ್ಲಿ ನೀಡಲಾದ ಅನುದಾನದಲ್ಲಿ 5'XB" , 6"X9" ಹಾಗೂ 8"X12" ಗಾತ್ರದ ಪಾಲಿಥಿನ್ ಚೀಲಗಳಲ್ಲಿ 7.96 ಲಕ್ಷ ಸಸಿಗಳನ್ನು ಬೆಳೆಸಲಾಗಿರುತ್ತದೆ.
2014–15	40.00	2014–15ನೇ ಸಾಲಿನಲ್ಲಿ ನೀಡಲಾದ ಅನುದಾನದಲ್ಲಿ 2013–14ನೇ ಸಾಲಿನಲ್ಲಿ ಬೆಳೆಸಿರುವ ಸಸಿಗಳನ್ನು ಪೋಷಣೆ ಮಾಡಿ ಈ ಸಸಿಗಳನ್ನು ಶಾಲಾ ಮಕ್ಕಳಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ 2014–15ನೇ ಸಾಲಿನಲ್ಲಿ 8"X12" ಗಾತ್ರದ ಪಾಲಿಥಿನ್ ಚೀಲಗಳಲ್ಲಿ 0.805 ಲಕ್ಷ ಸಸಿಗಳನ್ನು ಬೆಳೆಸಲು ಗುರಿ ನಿಗಧಿಪಡಿಷಲಾಗಿದೆ.

(ಇ) ಈ ಯೋಜನೆಯು ಯಶಸ್ವಿಯಾಗಿದೆ, ಶಾಲಾ ಮಕ್ಕಳಿಗೆ ಸಸಿಗಳನ್ನು ವಿತರಿಸಿ ಅವರಿಂದ ಪ್ರತಿಜ್ಞೆಯನ್ನು ಪಡೆದು ಸಸಿ ನೆಡಲು ಉತ್ತೇಜಿಸಿ, ಅರಣ್ಯ ಪರಿಸರದ ಬಗ್ಗೆ ಅರಿವು ಮೂಡಿಸಲಾಗಿದೆ.

(ಈ) ಉದ್ಭವಿಸುವುದಿಲ್ಲ.

(ಉ) ಶಾಲಾ ಮಕ್ಕಳಿಗೆ ಹಸರೀಕರಣದ ಬಗ್ಗೆ ಅರಿವು ಮೂಡಿಸುವ ಮೂಲಕ ಗಿಡ ನೆಡಲು ಹಾಗೂ ಯಾರ ಮನೆಯ ಆವರಣದಲ್ಲಿ ಅಥವಾ ಕೃಷಿ ಭೂಮಿಯಲ್ಲಿ ಜಾಗ ಲಭ್ಯವಿದೆಯೋ ಅಲ್ಲಿ ಗಿಡಗಳನ್ನು ಬೆಳೆಸಲು ಸಸಿಗಳನ್ನು ಪೂರೈಸಿ ವಿದ್ಯಾರ್ಥಿಗಳ ಸ್ವಯಂ ಪ್ರೇರಣೆಯಿಂದ ಸಸಿಗಳನ್ನು ಬೆಳೆಸುವ ಮೂಲಕ ಪರಿಸರ ಪ್ರಜ್ಞೆ ಬೆಳೆಸುವುದು ಯೋಜನೆಯ ಉದ್ದೇಶವಾಗಿದೆ. ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ರಾಜ್ಯಾದ್ಯಂತ ಶಾಲಾ ಕಾಲೇಜುಗಳು ಮತ್ತು ವಿಶ್ವ ವಿದ್ಯಾಲಯಗಳ ಆವರಣಗಳಲ್ಲಿ ಗಿಡಗಳನ್ನು ನೆಡುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಶ್ರೀ ಸುಧಾಕರ ಲಾಲ್ ಪಿ.ಆರ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಏನು ಇವತ್ತು ಈ ಒಂದು ಯೋಜನೆ ಪ್ರಾರಂಭವಾದಂತಹ ಸಂದರ್ಭದಲ್ಲಿ ಒಂದು ಕೋಟಿ ರೂಪಾಯಿಗಳನ್ನು ಈ ಒಂದು ಯೋಜನೆಗೆ ಬಿಡುಗಡೆ ಮಾಡಿದ್ದರು. 2011–12ರಲ್ಲಿ 29.82 ಲಕ್ಷ ಸಸಿಗಳನ್ನು ಬೆಳೆಸಿದರು ಮತ್ತು 2012–13ರಲ್ಲಿ ಆ ಸಸಿಗಳನ್ನು ಶಾಲಾ ಮಕ್ಕಳಿಗೆ ವಿತರಣೆಯನ್ನು ಕೂಡ ಮಾಡಿದ್ದಾರೆ. ಅದರ ನಂತರದಲ್ಲಿ ಏನು ಸುಮಾರು 7.96 ಲಕ್ಷ ಸಸಿಗಳನ್ನು ಬೆಳೆಸಿದ್ದೇವೆಂದು ಹೇಳುತ್ತಿದ್ದಾರೆ, ಆ ಬೆಳೆದಿರತಕ್ಕಂತಹ ಸಸಿಗಳನ್ನು ಶಾಲೆಗಳಿಗೆ ತಲುಪಿಸತಕ್ಕಂತಹ ನಿಟ್ಟಿನಲ್ಲಿ ಇವತ್ತು ಅನುದಾನ ಕೂಡ ಇಲ್ಲ. ಹಾಗಾಗಿ ನಾನಾದರೂ ಕೂಡ ಈ ಒಂದು ಯೋಜನೆ ಪ್ರಾರಂಭವಾದಾಗ, ಆರಂಭಶೂರತ್ವ ಎಂಬ ರೀತಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡಿದ್ದರು. ಆನಂತರ 35 ಲಕ್ಷ, 40 ಲಕ್ಷ, 50 ಲಕ್ಷ ಈ ರೀತಿ ಕಡಿಮೆ ಹಣವನ್ನು ಅದಕ್ಕೆ ಇಟ್ಟಿದ್ದಾರೆ. ಮಕ್ಕಳ ಮುಖಾಂತರವಾಗಿ ಇವತ್ತು ಏನು ಪರಿಸರದ ಬಗ್ಗೆ ಅರಿವನ್ನು ಮೂಡಿಸುವಂತಹ ಕೆಲಸ...

ಅಧ್ಯಕ್ಷರು : ಪ್ರಶ್ನೆ ಏನೆಂದು ಕೇಳಿ.

ಶ್ರೀ ಸುಧಾಕರ ಲಾಲ್ ಪಿ.ಆರ್ .: ಅರಿವನ್ನು ಮೂಡಿಸುವಂತಹ ಕೆಲಸಕ್ಕೆ ಇವತ್ತು ಅನುದಾನ ಕಡಿಮೆ ಕೊಟ್ಟಿದ್ದಾರೆ.

ಅಧ್ಯಕ್ಷರು : ಅದಕ್ಕೆ ಇನ್ನೂ ಜಾಸ್ತಿ ಕೇಳಿ.

ಶ್ರೀ ಸುಧಾಕರ ಲಾಲ್ ಪಿ.ಆರ್. : ಅನುದಾನ ಇಲ್ಲದೇ ಬಹಳಷ್ಟು ಸಸಿಗಳು ಬೆಳೆಸಿರತಕ್ಕಂತಹದ್ದು ಇವತ್ತು ನರ್ಸರಿಗಳಲ್ಲಿಯೇ ಇದೆ. ಅದನ್ನು ಶಾಲೆಗಳಿಗೆ ತಲುಪಿಸುವಂತಹ ಕೆಲಸವನ್ನು ಮಾನ್ಯ ಸಚಿವರು ಮಾಡುತ್ತಾರೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ.ರಮಾನಾಥ್ ರೈ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ "ಮಗುವಿಗೊಂದು ಮರ, ಶಾಲೆಗೊಂದು ವನ" ಎಂದು ಹೇಳುವ ಒಂದು ಕಾರ್ಯಕ್ರಮ ಹಮ್ಮಿಕೊಂಡಿದ್ದು, ಸಾಕಷ್ಟು ಗಿಡಗಳನ್ನು ಶಾಲೆಗಳಲ್ಲಿ ಮಕ್ಕಳ ಮೂಲಕ ನೆಡತಕ್ಕಂತಹ ಕೆಲಸಕ್ಕೆ ಈಗಾಗಲೇ ಒದಗಿಸಲಾಗಿದೆ. ಶಾಲೆಗಳಿಗೆ ಗಿಡಗಳನ್ನು ನೆಡಲಿಕ್ಕೆ ಸಸಿಗಳನ್ನು ಕೊಟ್ಟು ಸಾಕಷ್ಟು ಶಾಲೆಗಳಲ್ಲಿ ಒಳ್ಳೆಯ ರೀತಿಯಲ್ಲಿ ಗಿಡಗಳನ್ನು ನೆಟ್ಟು ಪೋಷಣೆ ಮಾಡತಕ್ಕಂತಹ ಕೆಲಸವಾಗಿದೆ. ಶಾಸಕರು ತಮಗೆ ಕೊಟ್ಟಿರುವ ಅನುದಾನ ಕಡಿಮೆ ಎನ್ನುವ ಮಾತನ್ನು ಹೇಳಿದ್ದಾರೆ. ಯಥಾವತ್ತಾಗಿ ಏನು ಕಾರ್ಯಕ್ರಮವಿದೆ ಅದನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಮಾಡಲಿಕ್ಕೆ ಸೂಕ್ತ ಕ್ರಮವನ್ನು ನಾವು ಕೈಗೊಳ್ಳುತ್ತೇವೆ.

ಶ್ರೀ ಸುಧಾಕರ ಲಾಲ್ ಪಿ.ಆರ್.: ಮಾನ್ಯ ಅಧ್ಯಕ್ಷರೆ, ಈಗ ಯೋಜನೆ ಪ್ರಾರಂಭವಾದಾಗ 29.82 ಲಕ್ಷ ಸಸಿಗಳನ್ನು ಬೆಳೆಸುತ್ತಾರೆ. ಆದರೆ, ಈ ಕೇವಲ 7.96 ಲಕ್ಷ ಸಸಿಗಳನ್ನು ಬೆಳೆಸಿದ್ದಾರೆ. ಇವತ್ತಿನವರೆಗೂ ಕೂಡ ಅವು ಶಾಲೆಗಳನ್ನು ತಲುಪಿಲ್ಲ. ಅದು ತಲುಪದೇ ಇರುವುದಕ್ಕೆ ಕಾರಣವೇನೆಂದರೆ, ಅನುದಾನವಿಲ್ಲ, ಅದನ್ನು ಹಂಚಿಕೆ ಮಾಡುವುದಕ್ಕೆ ದುಡ್ಡಿಲ್ಲವೆನ್ನುವ ಮಾತನ್ನು ಎಲ್ಲಾ ಕಡೆ ಹೇಳುತ್ತಿದ್ದಾರೆ. ಹಾಗಾಗಿ ಬೆಳೆಸಿರುವ ಸಸಿಗಳನ್ನು ಶಾಲೆಗಳಿಗೆ ತಲುಪಿಸುತ್ತೀರಿ ಯಾವಾಗ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕಾಗುತ್ತದೆ.

ಶ್ರೀ ಬಿ.ರಮಾನಾಥ್ ರೈ : ಮಾನ್ಯ ಅಧ್ಯಕ್ಷರೆ, ಶಾಸಕರು ಅನುದಾನ ಕೊರತೆಯಿದೆ ಎಂದು ಅಲ್ಲಿ ಹೇಳುತ್ತಾರೆ ಎನ್ನುವ ಮಾತನ್ನು ಹೇಳುತ್ತಾರೆ. ತಮ್ಮ ಮಾತನ್ನು, ತಮ್ಮ ವಿಚಾರವನ್ನು ಅರ್ಥ ಮಾಡಿಕೊಂಡು ಏನು ಸಮಸ್ಯೆಯಿದೆ ಅದಕ್ಕೆ ಅನುದಾನ ಒದಗಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ಸಚಿವರೆ, ಹೆಚ್ಚಿಗೆ ಅನುದಾನ ಕೊಡುತ್ತೇನೆ ಎಂದು ಹೇಳಿದರೆ ಆಯಿತು. ಹೆಚ್ಚು ಎಂದು ಪದ ಸೇರಿಸಿ ಎಂದು ಹೇಳುತ್ತಾರೆ.

ಶ್ರೀ ಬಿ.ರಮಾನಾಥ್ ರೈ : ಈಗ ನಿಮಗೆ ಏನು ಅನುದಾನದ ಅಗತ್ಯವಿದೆ ಅದನ್ನು ಒದಗಿಸಲಿಕ್ಕೆ ನಾನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು : O.K.

ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸುತ್ತಾರೆ.

ಅರಣ್ಯ ಇಲಾಖೆಯಿಂದ ನೋಟಿಸ್ ಜಾರಿಗೊಳಿಸಿರುವುದು

09(4) ಶ್ರೀ ಬೋಪಯ್ಯ ಕೆ.ಜಿ. (ವಿರಾಜಪೇಟೆ):– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–